

ಸುಲಭವೇನಲ್ಲ. ಅದೇಕೋ, ಆ ಪಾತ್ರವನ್ನು ನಾನು ಚೆನ್ನಾಗಿ ಮಾಡುತ್ತೇನೆ ಎಂದು ಚಿಕ್ಕಂದಿನಲ್ಲಿ ಗುರುಗಳು ಆಗಾಗ ಹೇಳುತ್ತಿದ್ದರು. ಆದರೆ ಮೊತ್ತ ಮೊದಲು ಶಾಲೆಯಲ್ಲಿ ನಾನು ಶ್ರೀಕೃಷ್ಣನ ಪಾತ್ರವನ್ನು ನಿರ್ವಹಿಸಿದೆ. ಭಗವದ್ದೂತ (ಶ್ರೀಕೃಷ್ಣ ಸಂಧಾನ), ಕೃಷ್ಣ ಸುಧಾಮ, ಪಾರ್ಥಸಾರಥಿ – ಹೀಗೆ ಅನೇಕ ಸಂದರ್ಭಗಳ ಪಾತ್ರ ನಿರ್ವಹಿಸಿರುವೆ.

◆ **ಕಥಕಳಿಯ ಬಗ್ಗೆ ಹೊಸ ತಲೆಮಾರಿನ ಕಲಾವಿದರ ಆಸಕ್ತಿ ಹೇಗಿದೆ?**

ಹೊಸತಲೆಮಾರಿನ ಕಲಾವಿದರು ಕಥಕಳಿಯ ಬಗ್ಗೆ ಆಸಕ್ತಿ ತೋರುತ್ತಿದ್ದಾರೆ. ಶಾಸ್ತ್ರೀಯ ಕಲೆಯಲ್ಲಿ ತೊಡಗಿಸಿಕೊಳ್ಳುವುದು ಅವರಿಗೆ ಹೆಮ್ಮೆಯ ವಿಷಯ. ಹಾಗಾಗಿ ಅನೇಕರು ತರಬೇತಿ ಕೇಂದ್ರಗಳಲ್ಲಿ ಕಥಕಳಿ ತರಬೇತಿ ಪಡೆಯುತ್ತಿದ್ದಾರೆ. ಆದರೆ ಈಗಿನ ತಲೆಮಾರು ಜ್ಞಾನವನ್ನು ಸಂಗ್ರಹಿಸುವ ರೀತಿ ನಮಗೆ ಅರ್ಥವಾಗುವುದಿಲ್ಲ. ಕಲಾವಿದರಾದವರು ಪ್ರತಿದಿನ ಓದಬೇಕು ಎಂದು ನಮ್ಮ ಗುರುಗಳು ಹೇಳುತ್ತಿದ್ದರು. ನಾವು ದಿನಸಿ ಸಾಮಾನು ಕಟ್ಟಿದ ಪೇಪರ್ ಸಹಿತ ಓದುತ್ತಿದ್ದೆವು. ಹಾಗೆ ಒಂದು ತಿಂಡಿ ಕಟ್ಟಿದ ಪೊಟ್ಟಣದಲ್ಲಿ ಮಹಾಭಾರತದ ಕಥೆಯೊಂದರ ಅರ್ಧಭಾಗವನ್ನು ಓದಿದ್ದೆ. ಅದೇ ಕಥೆಯನ್ನು ನಾನೇ ವಿಸ್ತರಿಸಿ ಒಂದು ಪ್ರಸಂಗವನ್ನೇ ಬರೆದಿದ್ದೆ. ಕಲಾವಿದನ ಜೀವನಾನುಭವ ಶ್ರೀಮಂತವಾಗಿರಬೇಕು. ಆಗ ರಂಗದ ಮೇಲಿನ ಪ್ರದರ್ಶನ ಸುಂದರವಾಗುತ್ತದೆ. ಕಥಕಳಿಯಲ್ಲಿ 'ವಾಚಿಕ'ಕ್ಕೆ ಅವಕಾಶ ಇಲ್ಲದೇ ಇರುವುದರಿಂದ ಅಭಿನಯವು ಸಮರ್ಥವಾಗಿರಬೇಕು. ಹಸ್ತಲಕ್ಷಣ ದೀಪಿಕಾವನ್ನು ಓದಿಕೊಂಡು ಅಭಿನಯದಲ್ಲಿ ಕಥೆಯನ್ನು ಸಂವಹನ ಮಾಡುವ ಕಲೆ ಕಲಿತುಕೊಂಡರೂ, ಅದು ರಸವತ್ತಾಗಿ ಮೂಡಿಬರುವುದು ವೇದಿಕೆಯಲ್ಲಿ ನಾವು ನಮ್ಮದೇ ಆದ ರೀತಿಯಲ್ಲಿ ಪಾತ್ರವನ್ನು ಪ್ರಸ್ತುತಪಡಿಸುವಾಗ. ಉದಾಹರಣೆಗೆ, ನಾನು ಭೀಮನ ಪಾತ್ರವನ್ನು ಸುಮಾರು 500ಕ್ಕೂ ಹೆಚ್ಚು ಬಾರಿ ಮಾಡಿರಬಹುದು. ಪ್ರತಿಯೊಂದು ಪ್ರದರ್ಶನವೂ ನನಗೆ ಹೊಸದು ಎಂದು ಅನಿಸಿದರೆ, ಅದು ಪ್ರೇಕ್ಷಕನಿಗೂ ಹೊಸದು ಅನಿಸುತ್ತದೆ. ಅದು ಹೇಗೆ ಸಾಧ್ಯ? ನಮ್ಮ ಅಧ್ಯಯನ, ಬದುಕಿನ ಪ್ರತಿಯೊಂದು ವಿಚಾರಗಳ ಬಗ್ಗೆ ತಿಳಿವಳಿಕೆ ಹೊಂದುವುದು, ಹೊಸ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲವನ್ನು ಉಳಿಸಿಕೊಳ್ಳುವ ಮೂಲಕ. ಹೀಗೆ ನಮ್ಮ ವ್ಯಕ್ತಿತ್ವವು ದಿನೇ ದಿನೇ ಪಕ್ವವಾಗುತ್ತಾ ಹೋಗುತ್ತದೆ. ಶ್ರೀಮಂತ ಜೀವನಾನುಭವ ಇದ್ದಾಗ ಕಲಾವಿದನಿಗೆ ವೇದಿಕೆಯಲ್ಲಿ ಸ್ಫುರಿಸುವ ಆಲೋಚನೆಗಳೂ ನವೀನವಾಗಿರುತ್ತವೆ. ಆದರೆ ಈ ತೀವ್ರತೆಯು ಹೊಸತಲೆಮಾರಿನವರಲ್ಲಿ ಕಾಣಿಸದು. ಅಥವಾ ಅವರಿಗೆ ಜ್ಞಾನವು ಲಭ್ಯವಾಗುವ ರೀತಿ ಈಗ ಬದಲಾಗಿರಲೂಬಹುದು.

●